

2023 ಮಕ್ಕಳು

# ಹಸಿವು, ಆರೋಗ್ಯ, ಶಿಕ್ಷಣ, ರಕ್ಷಣೆಗಳ ಮೂಲಮಂತ್ರ

**ಕಳೆದ ಎರಡು ಮೂರು ವರ್ಷಗಳಲ್ಲಿನ ಜಾಗತಿಕ ಮತ್ತು ಸ್ಥಳೀಯ ಘಟನೆಗಳು, ಬೆಳವಣಿಗೆಗಳು, ಪರಿಸ್ಥಿತಿಗಳನ್ನು ಮಕ್ಕಳು ಮತ್ತು ಮಕ್ಕಳ ಹಕ್ಕುಗಳ ದೃಷ್ಟಿಕೋನದಲ್ಲಿ ನೋಡಿದಾಗ ಮಕ್ಕಳ ಭವಿಷ್ಯದ ಬಗ್ಗೆ ಆತಂಕದ ಗೆರೆಗಳು ಮೂಡುತ್ತವೆ.**

ಒಂದೆಡೆ ಕೋವಿಡ್ ಮತ್ತು ಅದರ ಪರಿಣಾಮವಾಗಿ ಆಗಿರುವ ವಯಸ್ಕರ ಉದ್ಯೋಗ ನಷ್ಟ, ವಲಸೆ ಮತ್ತು ಇವುಗಳಿಂದಾಗಿ ಮಕ್ಕಳಿಗಾದ ಶಾಲಾ ದಿನಗಳ ಕಡಿತ ಮತ್ತು ಶಾಲೆಗಳನ್ನು ತೊರೆಯಬೇಕಾದಂತಹ ಪರಿಸ್ಥಿತಿ ಬಹಳ ಪ್ರಮುಖವಾಗಿದೆ. ಅಧಿಕೃತ ವರದಿಗಳಂತೆ ರಾಜ್ಯದಲ್ಲಿ 10 ಲಕ್ಷಕ್ಕೂ ಹೆಚ್ಚು ಮಕ್ಕಳು ರಾಜ್ಯದಲ್ಲಿ ಶಾಲಾ ಕಲಿಕೆಯಿಂದ ಹೊರಗಿದ್ದಾರೆ! ಕೋವಿಡ್ ಮೇಲಿನ ಗಮನ ಇತರ ಸಾಂಕ್ರಾಮಿಕಗಳನ್ನು ಹರಡಲು ಮತ್ತು ಶಿಶು ಮರಣ, 5 ವರ್ಷದೊಳಗಿನ ಮಕ್ಕಳ ಮರಣಕ್ಕೂ ದಾರಿಯಾಯಿತು ಎಂಬುದು ಆತಂಕಕಾರಿ. ವ್ಯಾಪಾರ ಉದ್ದಿಮೆಗಳಲ್ಲಿನ ಆರ್ಥಿಕ ಹಿಂಜರಿತ ಮತ್ತು ಆರ್ಥಿಕತೆ ನಿಧಾನವಾಗುತ್ತಿದೆ. ಇದರ ಅರಿವಾಗುವುದು – ಹಣದುಬ್ಬರ, ಬೆಲೆ ಏರಿಕೆಯ ಪರಿಣಾಮ ಮಕ್ಕಳ ಆಹಾರ, ಔಷಧಿ, ಶಿಕ್ಷಣಕ್ಕೆ ಸಾಮಾನ್ಯ ಜನರಲ್ಲಿ ಹಣ ಇಲ್ಲದಿರುವಿಕೆಯಲ್ಲಿ. ಇವು ಅಪೌಷ್ಟಿಕತೆ, ಲಿಂಗ ತಾರತಮ್ಯ, ಮಕ್ಕಳ ಸಾಗಣೆ, ಮುಂದೆ ಲಿಂಗ ಅನುಪಾತ ಕುಸಿಯುವುದಕ್ಕೆ ದಾರಿಯಾಗಿರುವುದು ಜನಸಮೂಹಗಳ ನಡುವೆ ಒಡನಾಡುವಾಗ ಅರಿವಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಆಗಿಹೋಗಿರುವ ಬಾಲ್ಯವಿವಾಹಗಳು ಮತ್ತು ತಡೆಯಲಾದ ಬಾಲ್ಯವಿವಾಹ ಪ್ರಯತ್ನಗಳು ನಮ್ಮ ಪರಿಸ್ಥಿತಿಗೊಂದು ಕನ್ನಡಿಯಾಗಿದೆ.

ಯುದ್ಧ, ಹವಾಮಾನ ಬದಲಾವಣೆ, ಅಕಾಲಿಕ ಮಳೆ, ಪ್ರವಾಹ, ಆಹಾರ ಬೆಳೆಗಳ ನಾಶ, ಸೋಂಕುಗಳು ಮತ್ತು ರೋಗಗಳು ಉಲ್ಬಣವಾಗುವ ಪರಿಸ್ಥಿತಿಗಳ ನೇರ ಪರಿಣಾಮ ಮಕ್ಕಳ ಮೇಲೆ ಆಗಿದೆ.



**ಡಾ. ವಾಸುದೇವ ಶರ್ಮಾ ಎನ್.ವಿ.**
**ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು**

## ಆದ್ಯತೆಗಳು ಯಾವುದಿರಬೇಕು?

- ಕರ್ನಾಟಕವಷ್ಟೇ ಅಲ್ಲದೆ, ಭಾರತ ದೇಶ ಮತ್ತು ಜಾಗತಿಕವಾಗಿ ಮಕ್ಕಳ ದೃಷ್ಟಿಕೋನದಲ್ಲಿನ ಆದ್ಯತೆಗಳ ಪಟ್ಟಿಯಲ್ಲಿ ಮೊದಲು ಕಾಣುತ್ತಿರುವುದು: ಮಕ್ಕಳ ಕಲಿಕೆಯ ಚೇತರಿಕೆ, ಮತ್ತು ಅವುಗಳಿಗೆ ಬೇಕಿರುವ ವಿವಿಧ ಸೌಲಭ್ಯಗಳು, ಶಿಕ್ಷಕ ವರ್ಗದ ನೇಮಕ ಹಾಗೂ ಕಲಿಕೆಗಾಗಿ ಸಾಮಗ್ರಿಗಳನ್ನು ಉಚಿತವಾಗಿ ಅಥವಾ ಅತ್ಯಂತ ಕಡಿಮೆ ದರದಲ್ಲಿ ಒದಗಿಸಬೇಕಿರುವುದು. 'ರಾಷ್ಟ್ರೀಯ ಶಿಕ್ಷಣ ನೀತಿ'ಯ ಭರವಸೆಗಳ ನಡುವೆ 'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009'ರಲ್ಲಿರುವ ಅವಕಾಶಗಳನ್ನು ಮರೆಯಬಾರದು. ರಾಜ್ಯದ ಗಡಿಭಾಗಗಳಲ್ಲಿರುವ ಶಾಲೆಗಳಲ್ಲಿ ಮಕ್ಕಳಿಗೆ, ಅದರಲ್ಲೂ ಹೆಣ್ಣುಮಕ್ಕಳಿಗೆ ಶಿಕ್ಷಣದ ಖಾತರಿ ಮುಖ್ಯವಾಗುತ್ತದೆ.
- ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿನ ಅತ್ಯಂತ ಪ್ರಮುಖ ಅಂಶ ಹಸಿವನ್ನು ಕೊನೆಗೊಳಿಸುವುದು ಮತ್ತು ಆರೋಗ್ಯ ಸುಧಾರಣೆ. ಮಕ್ಕಳು ಮತ್ತು ಹದಿಹರೆಯದವರ ಹಸಿವು ಮತ್ತು ಅಪೌಷ್ಟಿಕತೆ ಭಾರತದ ಅಭಿವೃದ್ಧಿಗೆ ಅಡ್ಡಗಾಲು ಹಾಕಿದೆ. ಗ್ರಾಮೀಣ ಮತ್ತು ನಗರಗಳ ಬಡವರು, ಭೂಹೀನ ಸಮುದಾಯಗಳ ಮಕ್ಕಳೇ ಇದಕ್ಕೆ ಹೆಚ್ಚು ಬಲಿಯಾಗುತ್ತಿರುವುದು. ಪ್ರಾಥಮಿಕ ಚಿಕಿತ್ಸೆಯ ಜೊತೆಜೊತೆಗೇ ಪ್ರತಿಶತ ಎಲ್ಲ ರೋಗನಿರೋಧಕಗಳನ್ನು ಎಲ್ಲ ಮಕ್ಕಳಿಗೆ ಕಡ್ಡಾಯವಾಗಿ ತಲುಪಿಸುವ ಜವಾಬುದಾರಿ ಈಗ ಎಲ್ಲರ ಮೇಲಿದೆ.
- ಹವಾಮಾನ ಬದಲಾವಣೆಯ ಪ್ರಭಾವ ಮಕ್ಕಳ ಮೇಲೆ ಆಗುತ್ತಿರುವ ಕುರಿತು ಜನಸಮುದಾಯವಿರಲಿ, ನೀತಿ ನಿರೂಪಕರಲ್ಲೂ ಜಾಗೃತಿಯ ಕೊರತೆ ಕಾಣುತ್ತಿದೆ. ಈಗಿಂದೀಗಲೇ ಮಕ್ಕಳಿಗೂ ತಿಳಿಯುವಂತೆ ಹವಾಮಾನ ಬದಲಾವಣೆ ತಡೆಯಲು ಕ್ರಮಗಳು ಮತ್ತು ಬದಲಾವಣೆ ಆದಂತೆ ಅದಕ್ಕೆ ಹೊಂದಿಕೊಳ್ಳುವ ಮನೋಭಾವ ಮತ್ತು ನಡವಳಿಕೆಗಳನ್ನು ಕಲಿಯುವ ಮತ್ತು ಬದಲಿಸುವ